ಪ್ರಸ್ತಾವವು ಅಂಗೀಕಾರವಾಗಿದೆ

ವಂದನಾ ನಿರ್ಣಯದ ಪಸ್ತಾವಕ್ಕೆ ಸಭೆಯ ಅನುಮತಿ ದೊರಕಿದೆ

ವಂದನಾ ನಿರ್ಣಯವನ್ನು ಘನವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಶ್ರೀ ಸಿದ್ದರಾಮಯ್ಯ: ಅಧ್ಯಕ್ಷರೆ, ಧನ್ಯವಾದಗಳು.

ಅಧ್ಯಕ್ಷರು: ಈಗ ಪ್ರಶ್ನೋತ್ತರ.

7.4 (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪ್ರಶ್ನೆ ಸಂಖ್ಯೆ 61 (917)
(ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ ಸಂಖ್ಯೆ 62(1127)
(ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ ಸಂಖ್ಯೆ 63(387)
(ಸದಸ್ಯರು ಹಾಜರಿರಲಿಲ್ಲ)

ಪ್ರಶ್ನೆ ಸಂಖ್ಯೆ 64(877)

ಅಧ್ಯಕ್ಷರು: ರವಿಯವರೇ, ನಿಮ್ಮ ಪ್ರಶ್ನೆಗೆ ಉತ್ತರಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಇಲ್ಲ. ಅವರು ದೆಹಲಿಗೆ ಹೋಗಿದ್ದಾರೆ.

ವೈದ್ಯಕೀಯ ಕಾಲೇಜು ಮಂಜೂರು

65(1170); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) 2014–15 ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಗೆ ನೂತನವಾಗಿ ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭ ಮಾಡಲು ಸರಕಾರ ಕ್ರಮ ತೆಗೆದುಕೊಳ್ಳಲಿದೆಯೇ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಡಾ: ಶರಣಪ್ರಕಾಶ್ ಆರ್. ಪಾಟೀಲ್, ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಅವರ ಪರವಾಗಿ)

ಅ) 2013–14 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿನ ಘೋಷಣೆಯಂತೆ, ಆಯಾ ಜಿಲ್ಲೆಗಳಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳ ಲಭ್ಯತೆಯನ್ನಾಧರಿಸಿ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಚಾಮರಾಜನಗರ, ಕೊಡಗು, ಕಾರವಾರ, ಕೊಪ್ಪಳ, ಗದಗ ಮತ್ತು ಗುಲ್ಬರ್ಗಾ ಇಲ್ಲಿ 06 ವೈದ್ಯಕೀಯ ಕಾಲೇಜುಗಳನ್ನು 2014–15 ನೇ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದ್ದು, ಈ ಸಂಬಂಧಿತವಾಗಿ ಭಾರತೀಯ ವೈದ್ಯಕೀಯ ಪರಿಷತ್ತಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಗಳನ್ನೂ ಸಹ ಸಲ್ಲಿಸಲಾಗಿದೆ ಹಾಗೂ ಸದರಿ ಸ್ಥಳಗಳಲ್ಲಿ ಪ್ರಾರಂಭಿಸಲಾಗುತ್ತಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಹಾಗೂ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲು ಅವಶ್ಯ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ.

ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಬೇಕೆಂಬುದು ಸರ್ಕಾರದ ಧ್ಯೇಯೋದ್ದೇಶವಾಗಿದ್ದು, ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಇಲ್ಲದ ರಾಜ್ಯದ ಇನ್ನಿತರೆ ಜಿಲ್ಲೆಗಳಲ್ಲಿಯೂ ಸಹ ವೈದ್ಯಕೀಯ ಕಾಲೇಜುಗಳ ಸ್ಥಾಪನೆಗೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನ್ನಾಧರಿಸಿ ವೈದ್ಯಕೀಯ ಕಾಲೇಜುಗಳನ್ನು ಹಂತ ಹಂತವಾಗಿ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. .

ಅದರಂತೆಯೇ, ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ಹಾವೇರಿಯಲ್ಲಿಯೂ ಸಹ ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ಅವಶ್ಯವಿರುವ ಮೂಲಭೂತ ಸೌಲಭ್ಯಗಳ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನ್ನಾಧರಿಸಿ ಹೊಸ

ಸರ್ಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶ್ರೀ ಯು.ಬಿ. ಬಣಕಾರ್‌ರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರಗಳಲ್ಲಿ, ಇಂದಿನ ಸರ್ಕಾರದಲ್ಲಿ ನಾವು ತಾತ್ವಿಕವಾಗಿ ಒಪ್ಪಿಕೊಂಡಿರುವ ಒಂದು ಅಂಶವೆಂದರೆ ಎಲ್ಲ ಜಿಲ್ಲೆಗಳಲ್ಲಿಯೂ ಸಹ ಮೆಡಿಕಲ್ ಕಾಲೇಜುಗಳನ್ನು ಮಾಡಬೇಕು ಎನ್ನುವಂಥದ್ದಾಗಿದೆ. ಈ ವರ್ಷ ಚಾಮರಾಜನಗರ, ಕೊಡಗು, ಕಾರವಾರ, ಕೊಪ್ಪಳ, ಗದಗ ಮತ್ತು ಗುಲ್ಬರ್ಗಾ ಈ 6 ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಕಳುಹಿಸಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಹಿಂದಿನ ವರ್ಷಗಳಿಂದಲೂ ಸಹ ಹಾವೇರಿಯ ಜಿಲ್ಲಾಸ್ಪತ್ರೆಯನ್ನು ತೆಗೆದುಕೊಂಡು ಹಾವೇರಿಯಲ್ಲಿ ಒಂದು ವೈದ್ಯಕೀಯ ಕಾಲೇಜು ಅನ್ನು ಪ್ರಾರಂಭಿಸುವುದಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟಿತ್ತು. ಆ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹಿರೇಕೆರೂರಿಗೆ ಮೊನ್ನೆ ಬಂದಾಗಲೂ ಸಹ ಮತ್ತು ಬೇರೆ ಬೇರೆ ಸಂದರ್ಭದಲ್ಲಿ ಹಾವೇರಿಗೆ ಬಂದಾಗಲೂ ಸಹ ಈ ವರ್ಷವೇ ಅದನ್ನು ಮಾಡಿಕೊಡುತ್ತೇವೆನ್ನುವ ಮಾತನ್ನು ಹೇಳಿದ್ದರು. ಹಾಗಾಗಿ ಈ ವರ್ಷವೇ ಅದನ್ನೂ ಸಹ ಸರ್ಕಾರ ಪರಿಶೀಲಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನಾ ಸಚಿವರು) (ಡಾ: ಶರಣಪ್ರಕಾಶ್ ಆರ್. ಪಾಟೀಲ್, ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಆಯವ್ಯಯದಲ್ಲಿ ಘೋಷಣೆ ಮಾಡಿದ ರೀತಿಯಲ್ಲಿಯೇ ಏನು ಆಸ್ಪತ್ರೆಗಳನ್ನು ಮಂಜೂರು ಮಾಡುತ್ತೇವೆ, ವೈದ್ಯಕೀಯ ಕಾಲೇಜುಗಳನ್ನು ಮಂಜೂರು ಮಾಡುತ್ತೇವೆನ್ನತಕ್ಕಂಥದ್ದು ಈ ವರ್ಷ ಪ್ರಾರಂಭವಾಗುತ್ತದೆ. ಈ ವರ್ಷವೂ ಕೂಡ ಸುಮಾರು 6 ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಆ ಸಂದರ್ಭದಲ್ಲಿ ಹಾವೇರಿಗೂ ಕೂಡ

ವೈದ್ಯಕೀಯ ಆಸ್ಪತ್ರೆಯನ್ನು ಮಂಜೂರು ಮಾಡತಕ್ಕಂಥದ್ದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮುಂದಿನ ವರ್ಷವಾದರೂ ಆದ್ಯತೆ ಮೇಲೆ ಕಾಲೇಜನ್ನು ಮಾಡಿಕೊಡಬೇಕು.

ಅಧ್ಯಕ್ಷರು: ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಆಗಬಹುದು.

ಪ್ರಶ್ನೆ ಸಂಖ್ಯೆ: 66(889)

ಮಾನ್ಯ ಸದಸ್ಯರಾದ ಶ್ರೀ ಶಿವಶಂಕರ್ ಎಚ್.ಎಸ್. ರವರು ಗೈರುಹಾಜರಾಗಿದ್ದರು.

ಪ್ರಶ್ನೆ ಸಂಖ್ಯೆ: 67(895)

ಮಾನ್ಯ ಸದಸ್ಯರಾದ ಶ್ರೀ ವೆಂಕಟೇಶ್ ಕೆ. ರವರು ಗೈರುಹಾಜರಾಗಿದ್ದರು.

ಪ್ರಶ್ನೆ ಸಂಖ್ಯೆ: 68(381)

ಮಾನ್ಯ ಸದಸ್ಯರಾದ ಡಾ: ಉಮೇಶ್ ಜಿ. ಜಾಧವ್ ರವರು ಗೈರುಹಾಜರಾಗಿದ್ದರು.

ಎ.ಪಿ.ಎಲ್. ಕಾರ್ಡ್‌ದಾರರಿಗೆ ಪಡಿತರ

69(943); ಡಾ. ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ಎಪಿಎಲ್ ಕಾರ್ಡುದಾರರಿಗೆ ಅಕ್ಕಿ-ಗೋಧಿ ಸೇರಿದಂತೆ ಪಡಿತರ ಪದಾರ್ಥಗಳನ್ನು ನೀಡಲಾಗುತ್ತಿದೆಯೇ; ನೀಡದಿದ್ದ ಪಕ್ಷದಲ್ಲಿ ಈ ಕಾರ್ಡ್‌ಗಳ ಅಗತ್ಯವಾದರು ಏನು;

ಆ) ಜಿಲ್ಲೆಯಲ್ಲಿ ಕಾರ್ಡ್ ಮಾಡಿಸಲು ದಿನನಿತ್ಯ ಸರ್ಕಾರಿ ಕಛೇರಿಗಳಿಗೆ ಸಾರ್ವಜನಿಕರು ತಮ್ಮ ಕೆಲಸ ಬಿಟ್ಟು ಅಲೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;